

# ಸ್ವರ್ಗ ನಮ್ ದುರ್ಗ...

**ಉಕ್ಕಿನಂಥ ಕೋಟೆಗೆ, ಗಟ್ಟಿಗಿತ್ತಿ ಓಬವ್ವಳ ಶೌರ್ಯಕ್ಕೆ ಹೆಸರಾಗಿರುವ ಚಿತ್ರದುರ್ಗ, ಪ್ರಕೃತಿಯ ಐಸಿರಿಯನ್ನೂ ಹೊದ್ದ ಸುಂದರ ತಾಣ. ಈ ಕೋಟೆ ನಾಡಿನ ಬಗ್ಗೆ, ಪರ ಊರಿನಲ್ಲಿ ನೆಲೆ ಕಂಡುಕೊಂಡ ಗೆಳತಿಯರಿಬ್ಬರು ಹರಟಿದ್ದಾರೆ. ತಮ್ಮ ತಾಯ್ನೆಲವನ್ನು, ಬಾಲ್ಯವನ್ನು, ಊರು, ಊರ ಐಕ್ಯತೆಯನ್ನು ಬಿಂಬಿಸುವ ಹಬ್ಬದ ನೆನಪುಗಳನ್ನು ಮೆಲುಕು ಹಾಕಿದ್ದಾರೆ. ಆ ಗೆಳತಿಯರ ಸಂಭಾಷಣೆಯನ್ನು ಚಿತ್ರದುರ್ಗದ ಭಾಷೆಯಲ್ಲಿ ಕಟ್ಟಿಕೊಟ್ಟಿದ್ದಾರೆ ಅಶ್ವಿನಿ ಎಸ್.ಟಿ.**

ಮಂಗಳೂರಿನ ಸುಂದರ ಕಡಲ ತೀರ. ಸಮುದ್ರದ ಅಲೆಗಳು ತೆರೆತೆರೆಯಾಗಿ ದಡ ಮುಟ್ಟಿ ಶಬ್ದ ತರಂಗವೆಬ್ಬಿಸುತಿದ್ದವು. ದಡದಲ್ಲಿದ್ದ ರಮ್ಯಾ, ಈ ವೀಕೆಂಡ್ ಆದ್ರೂ ಸಹನಾಳ ಮನೆಗೋಗಬೇಕು. ಈ ಆಫೀಸ್ ಡ್ಯೂಟಿ ಎಂದಿಗೂ ಮುಗಿಯದ ಕಥೆ ಎಂದುಕೊಂಡಳು.

ಟಿಂಗ್ ಟಿಂಗ್ ಬೆಲ್ ಎರಡು ಸಾರಿ ಮೊಳಗಿತು. ಬಾಗಿಲಿಗೆ ಬಂದ ಸಹನಾ, 'ಯವ್ವ ಬಾರೇ ಏಸ್ ದಿನ ಆಗಿತ್ತು ನಿಂದೇ ದಾರಿ ಕಾಯ್ ತಿದ್ದೆ' ಎಂದಳು. ಅಲ್ಲಿಂದ ಅವರ ಮಾತುಕಥೆ ಆರಂಭವಾಯಿತು.

ರ: ನಿಂಗೇ ಗೊತ್ತಲ್ಲೇ ನಮ್ ಆಫೀಸ್ ಕೆಲಸ. ಏನ್ ಕೆಟ್ ಬಿಸಿಲೈತಲೇ ಈ ಊರಾಗೆ.

ಸ: ಯಾಕೇಳ್ತಿಯಾ... ಬೆಳಿಗ್ಗಿಂದ ಬೆವರು ವರಿಸ್ಕ್ಯಂಡ್ ವರಿಸ್ಕ್ಯಂಡ್ ಸಾಕಾಗೈತೆ.

ರ: ಯಾ ಪಾಟಿ ಮಳೆ ಹೊಯ್‌ದ್ರೂ ಸೆಕೆ ನೋಡ್ ಇದ್ರ ಸೊಲ್ಲಡಗ.

ಸ: ಯಪ್ಪಾ ಬನ್ನಿ, ಹೋಗಿ ಕನ್ನಡ ಕೇಳಿ ಕೇಳಿ ಕಿವೆ ತೂತ್ ಬಿದ್ದಿದ್ವೆ. ದುರ್ಗದ್ ಕನ್ನಡ ಕೇಳಿ ತಂಪಾತು.

ರ: ನಾನು ನೀನು ಈ ಊರು ಸೇರಿ 3 ವರ್ಷ ಆದ್ರೂ ನಮ್ಮೂರ ಕನ್ನಡ ನಮ್ಮೂರ ಭಾಷೆಗೆ ಹಾತೊರಿತೀವಿ ನೋಡು. ಇಬ್ಬರಿಗೂ ಒಂದೇ ಸಾರಿ ಸರ್ಕಾರಿ ನೌಕರಿ ಇದೇ ಊರಗೆ ಸಿಕ್ಕು ಎಂಗೊ ಜೊತೆ ಆಗಿ ವಂದಿ ಕ್ಯಂಡು ಐದಿವಿ ಈ ಊರಗೆ.

ಸ: ಹೂಂ ಬಿಡು ಅತ್ಲಾಗೆ ಇದೇ ವತಂಗೈತೆ. ಜೀವನ ಹೆಂಗೋ ನಡೀತತೆ. ಮಳೆ ಬಂದ್ ಬಂದ್ ಇರುಸ್ಲು ವಡ್ದು ಗ್ವಾಡೆಲ್ಲಾ ನೆಂದೈತೆ ನೋಡು. ಇದೆಲ್ಲಾ ಅಡರಾಕಿ ಅಡುಗೆ ಮಾಡಿಟ್ಟು ಆಫೀಸ್‌ಗೆ ವೋಗೋ ವತ್ತಿಗೆ ಸಾಕಾಗ್ ತತೆ. ಕ್ವಳ್ಳೆ ಇವತ್ತು ಎದ್ದೇಟಿಕೆ ಉದುಕ ಮುದ್ದೆ ಮಾಡಿದ್ದೆ. ಕಾಳು ಒಗ್ಗರಣೆ ಹಾಕಿದ್ದೆ, ತಿನ್ನು.

ರ:ತತ್ತರೆ ಬಾಯೆಲ್ಲಾ ಕೆಟ್ ಹೋಗಿತ್ತು. ಇವಾಗ ಸರಿ ವೋಗ್ತತೆ. ಏನೇ ಅನ್ನು ನಮ್ ಕಡೆ ಊಟನೇ ಊಟ. ಇದರ ಮುಂದೆ ಅಮೃತನೂ ಬೇಡ. ಸಣ್ಣರಿದ್ದಾಗ ಕೋಟೆಗೆ ಶನುವಾರ ಭಾನುವಾರ ಓದ್ಕಣಕೆ ಅಂತ ಹೋಗ್ತಿದ್ವಿ. ಮಧ್ಯಾಹ್ನ ವೋಗಿ ಸಂಜೆ ತಕನಾ ಇದ್ದು ಅಲ್ಲೇ ಹೊಂಡದಗೆ ಮಕ ತೊಳ್ಕಂಡು ಫ್ರೆಶ್ ಆಗಿ ಮನಿಗೆ ಬರ್ತದ್ವಿ. ಕೋಟೆ ನೋಡಕ್ ಬಂದೋರು ಬ್ಯಾರೆ ಊರೋರು ಏಸ್ ಜನ ಇರುತ್ತಿದ್ದರು. ಅಲ್ಲೇ ತಿಂಡಿ ಹಂಚ್ಕಂಡು ತಿಂದು ತಣ್ಣೀರು ದೋಣಿ ನೀರು ಕುಡಿದು... ಇವಾಗಿನಂಗೆ ಪಿಲ್ಟರ್ ನೀರು ಇರಲಿಲ್ಲ. ದುರ್ಗದ ಉತ್ಸವ ಅಂತ ಒಂದು ಮೂನ್ರಾಲ್ಕು ವರ್ಷ ಮಾಡಿದ್ರು. ಆವಾಗಂತೂ ಜನ ಜನ.

ಸ: ಇವಾಗಂತೂ ಕೋಟೆ ನೋಡಂಗಿಲ್ಲ ಕಣೆ. ಈಗಲೂ ಟಿವ್ಯಾಗೆ ಕನ್ನಡ ನಾಡಿನ ವೀರರಮಣಿಯ ಹಾಡು ಬಂದ್ರೆ ಮಾಡ ಬಕ್ಕಡು ಬಿಟ್ಟು ಕುತ್ಕಮ್ ತಿನಿ. ಕೋಟೆ ನೋಡಕೆ ಹೋದಾಗ ಓಬವ್ವನ ಕಿಂಡಿ ನೋಡಿ ಅದರಗಳಾಸಿ ತೂರಿ ಬರತಿದ್ವಿ. ನಿಜಕ್ಕೂ ಓಬವ್ವನಂತರು ಈ ನೆಲದಲ್ಲಿ ಹುಟ್ಟಿ ಬಂದಿದ್ರಾ ಅಂತ ರೋಮಾಂಚನ ಆಗುತಿತ್ತು.

ಆದರೂ ಬೇರೆಲ್ಲಾ ಜಿಲ್ಲೆಗಳಿಗೆ ಹೋಲಿಸಿದರೆ ನಮ್ ಹೆಣ್ಣು ಮಕ್ಕಳು ಗಟ್ಟಿಗಿತ್ತಿಯರು. ಸಣ್ಣ ಪುಟ್ಟ ಕಷ್ಟಗಳಿಗೆ ಹೆದರಲ್ಲಾ ಹಿಂದೇಟಾಕಲ್ಲ. ಮುನ್ನುಗ್ತಾ ಇರ್ತಿವಿ. ಆ ಓಬವ್ವನ ಆಶೀರ್ವಾದನೇ ಇರಬೇಕು.